ಸಚಿವರು ಆಕ್ಟೀವ್ ಕನ್‌ಸಿಡ್ರೇಷನ್ ಎಂದು ಅಲ್ಲದೆ ಈ ಅಧಿವೇಶನದಲ್ಲಿಯೇ ಮೂಲ ಕಾನೂನಿಗೆ ತಿದ್ದುಪಡಿಯ ಸೂಚನೆಯನ್ನು ತರಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

Mr. SPEAKER : He will make marked improvement over that `active consideration'.

ಶ್ರೀಮತಿ ಎನ್. ಜ್ಯೋತಿ ರೆಡ್ಡಿ : ಮಾನ್ಯ ಸಚಿವರು ಗೌರಿಬಿದನೂರು ತಾಲ್ಲೂಕನ್ನು ಬಯಲುಸೀಮೆ ಅಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿ ಸೇರಿಸಲು ಕಾನೂನಿಗೆ ತಿದ್ದುಪಡಿ ತರಲು ಒತ್ತಾಯ ಮಾಡುತ್ತೇನೆ.

Mr. SPEAKER : I am with you. I will take up your case.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರು, ಕೃಷಿ ಸಚಿವರು, ನೀವುಗಳೆಲ್ಲರೂ ಒಂದೇ ಕಡೆಯವರು, ಎಲ್ಲವನ್ನು ನೀವುಗಳೇ ಸೇರಿಕೊಂಡು ಮಾಡಿಕೊಂಡು ಹೋಗಿಬಿಡಿ, ನಮ್ಮನ್ನೇನು ಕೇಳುವವರಿಲ್ಲದಂತಾಗುತ್ತಿದೆ; ನಮ್ಮ ಭಾಗ ಕೂಡ ಬಹಳಷ್ಟು ಹಿಂದುಳಿಳಿದಿರುವ ಪ್ರದೇಶವಾಗಿದೆ. ಅದನ್ನೇಕೆ ತಾವು ಇದರಲ್ಲಿ ಸೇರಿಸುವುದಿಲ್ಲ? ಅಧ್ಯಕ್ಷರೇ ತಾವು ಸ್ವಲ್ಪ ತಾರತಮ್ಯ ಮಾಡುತ್ತಿದ್ದೀರಿ, ನಾನು ಅದನ್ನು ಗಮನಿಸುತ್ತಿದ್ದೇನೆ!! ತಾವು ಕೋಲಾರದವರೆಲ್ಲರೂ ಇಲ್ಲಿ ಸೇರಿ ಕೊಂಡು ಏನೋ ಮಾಡುತ್ತಿರುವಂತಿದೆ! ಮಂತ್ರಿಗಳು ಕೋಲಾರ, ಅಧ್ಯಕ್ಷರು ಕೋಲಾರ ಸದಸ್ಯರು ಕೋಲಾರದವರು, ಇದೊಂದು ರೀತಿಯಲ್ಲಿ ಕೋಲಾರದವರದ್ದೇ ಏನೋ ನಡೆಯುತ್ತಿರುವಂತಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೆ, ಕೋಲಾರದವರೆಲ್ಲೂ ಸೇರಿಕೊಂಡು ಏನೊ ಪಿತೂರಿ ಮಾಡುತ್ತಿದ್ದಾರೆ ಎನ್ನತಕ್ಕದನ್ನು ನಾನು ಒಪ್ಪುವುದಿಲ್ಲ. ಕೋಲಾರದವರಾದ ನಾವುಗಳು ಖಂಡಿತವಾಗಿ ಆ ರೀತಿ ಪಿತೂರಿ ಮಾಡತಕ್ಕ ಜನರಲ್ಲ.

ಶ್ರೀ ಹೆಚ್. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಬಯಲುಸೀಮೆಯ ಕಾರ್ಯವ್ಯಾಪ್ತಿಯಲ್ಲಿ ರೈತರು ಬೆಳೆದಂಥ ಮಾಲುಗಳನ್ನು ತಮ್ಮ ತಮ್ಮ ಸ್ಥಾನಕ್ಕೆ ಮುಟ್ಟಿಸಲು ಅನುವು ಆಗುವ ರೀತಿಯಲ್ಲಿ ರಸ್ತೆಗಳನ್ನು ದುರಸ್ತಿ ಮಾಡುವುದಾಗಲಿ, ರಸ್ತೆಗಳನ್ನು ಮಾಡುವುದಾಗಲೀ ಸೇರಿಸಿ ಕೆಲಸ ಮಾಡುತ್ತಿರೋ?

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ನಿಯಮಾವಳಿಯ ಪ್ರಕಾರ ಶೇಕಡ ಅರವತ್ತರಷ್ಟನ್ನು ನೀರು ಮತ್ತು ಮಣ್ಣಿನ ಫಲವತ್ತತೆಯನ್ನು ಕನರ್ಸವ್ ಮಾಡಲು ಅಂದರೆ ವ್ಯವಸಾಯ ಮತ್ತು ವ್ಯವಸಾಯಕ್ಕೆ ಪೂರಕವಾಗಿರತಕ್ಕ ಉದ್ದೇಶಕ್ಕೆ ಉಪಯೋಗ ಮಾಡಬೇಕು. ಇನ್ನುಳಿದ ನಲವತ್ತರಷ್ಟು ಹಣವನ್ನು ರಸ್ತೆ ಮತ್ತು ಇತರೆ ಕಾಮಗಾರಿಗಳನ್ನು ಮಾಡಲು ಉಪಯೋಗ ಮಾಡಿಕೊಳ್ಳಬಹುದು. ನಿಯಮದ ಆಧಾರದ ಮೇಲೆಯೇ ನಾವು ಹಣವನ್ನು ಖರ್ಚು ಮಾಡುತ್ತೇವೆ.

ಅಂಕೋಲ ತಾಲ್ಲೂಕಿನಲ್ಲಿ ಪಟ್ಟಾ ನೀಡುವ ಬಗ್ಗೆ.

109 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿರ್ಸಿ-ಯಲ್ಲಾಪುರ-ಅಂಕೋಲ ತಾಲ್ಲೂಕಿನಲ್ಲಿ ಪಟ್ಟಾ ನೀಡಿದ ಸಂಖ್ಯೆ ಎಷ್ಟು;

ಆ) ಇನ್ನೂ ಎಷ್ಟು ಜನರಿಗೆ ಪಟ್ಟಾ ನೀಡಬೇಕಾಗಿದೆ; (ವಿವರವಾದ ಮಾಹಿತಿ ನೀಡುವುದು);

ಇ) ಪಟ್ಟಾ ನೀಡದಿರಲು ಕಾರಣವೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) 1. ಸಿರ್ಸಿ - 6,472
2. ಯಲ್ಲಾಪುರ - 2,508
3. ಅಂಕೋಲ - 2,006

ಆ) 1. ಸಿರ್ಸಿ - 1,846
2. ಯಲ್ಲಾಪುರ - 805
3. ಅಂಕೋಲ - 1,332

ಇ) ಯೋಗ್ಯವಾದ ಸರ್ಕಾರದ ಜಮೀನು ಲಭ್ಯವಿಲ್ಲದಿರುವುದರಿಂದ.

ಡಾ।। ಕರ್ಕಿ. ಎಂ.ಪಿ. (ವಿಶ್ವೇಶ್ವರ ಹೆಗಡೆಯವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಇಲ್ಲಿ ಕೆಲವೊಂದು ಅಂಕಿಅಂಶವನ್ನು ಪ್ರಶ್ನೆಗೆ ಸಂಬಂಧ ಪಟ್ಟಂತೆ ಕೊಟ್ಟಿದ್ದಾರೆ. ಸಿರ್ಸಿ, ಯಲ್ಲಾಪುರ, ಅಂಕೋಲ ತಾಲ್ಲೂಕುಗಳಲ್ಲಿ ಪಟ್ಟಾ ನೀಡಿದ ಸಂಖ್ಯೆ ಎಷ್ಟು ಎಂಬುದಕ್ಕೆ 6,472, 2,508, 2,006 ಎಂದು ಕ್ರಮವಾಗಿ ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ಜಿಲ್ಲೆಯು ಅರಣ್ಯ ಜಿಲ್ಲೆಯಾಗಿರುವುದರಿಂದ ನಮ್ಮಲ್ಲಿ ಕಂದಾಯ ನಿವೇಶನಗಳು ಇಲ್ಲವೇ ಇಲ್ಲ. ಆದ್ದರಿಂದ ತಾವು ಕಂದಾಯ ನಿವೇಶನವನ್ನು ಅರಣ್ಯ ನಿವೇಶನವನ್ನು ಎಷ್ಟು ಜನರಿಗೆ ಕೊಟ್ಟಿದ್ದೀರಿ ಎಂಬುದು ಮೊದಲ ಪ್ರಶ್ನೆ. ಎರಡನೆಯದಾಗಿ, ಅರಣ್ಯದಲ್ಲಿ ಮಂಜೂರಾಗಿರತಕ್ಕ ಜಮೀನೇನಿದೆ ಅದಕ್ಕೆ ಪಟ್ಟಾ ಮಾತ್ರ ಕೊಟ್ಟಿದ್ದಾರೆ. ಕಂದಾಯ ಇಲಾಖೆಗೆ ಅರಣ್ಯದ ಭೂಮಿ ಇನ್ನೂ ಸಹ ಬಿಡುಗಡೆಯಾಗಿಲ್ಲ. ಅದು ಇನ್ನೂ ಅರಣ್ಯ ಇಲಾಖೆಯ ಅಧೀನದಲ್ಲಿಯೇ ಇದೆ. ಆದ್ದರಿಂದ ಅರಣ್ಯ ಇಲಾಖೆಯಿಂದ ಆ ಭೂಮಿಯನ್ನು ಬಿಡಿಸಿ ಜನರಿಗೆ ಯಾವಾಗ ಕೊಡುತ್ತೀರಿ?

ಶ್ರೀ ಆರ್. ಎಲ್. ಜಾಲಪ್ಪ ಮಾನ್ಯ ಅಧ್ಯಕ್ಷರೆ, ಈಗ ಕೊಟ್ಟಿರುವ ಲ್ಯಾಂಡ್‌ನಲ್ಲಿ ಪಟ್ಟಾ ಜಮೀನು ಎಷ್ಟು, ಅರಣ್ಯ ಜಮೀನು ಎಷ್ಟು ಎಂಬ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ, ಬೇಕಾದರೆ ಅದನ್ನು ಒದಗಿಸಿಕೊಡುತ್ತೇನೆ. ತಾವು ಹೇಳಿದಂತೆ ಅಲ್ಲಿ ಹೆಚ್ಚಾಗಿ ಅರಣ್ಯ ಇರುವುದರಿಂದ ರೆವಿನ್ಯೂ ಭೂಮಿ ಬಹಳ ಕಡಿಮೆ ಇದೆ. 754 ಎಕರೆ ಪ್ರದೇಶವನ್ನು ನಮಗೆ ಬಿಟ್ಟುಕೊಡಬೇಕೆಂದು ಈಗಾಗಲೆ ಅರಣ್ಯ ಇಲಾಖೆಯವರಿಗೆ ಪತ್ರವನ್ನು ಬರೆದಿದ್ದೇವೆ. ಇದರ ಬಗ್ಗೆ ಕೇಂದ್ರ ಸರ್ಕಾರದೊಡನೆ ಸಹ ಸಮಾಲೋಚನೆ ನಡೆಯುತ್ತಿದೆ. ಅರಣ್ಯ ಇಲಾಖೆಯಿಂದ ಭೂಮಿ ಬಿಡುಗಡೆಯಾದ ಕೂಡಲೇ ರೆವಿನ್ಯೂ ನಿವೇಶನವನ್ನು ಕೊಡಲು ಮುಂದಾಗುತ್ತೇವೆ.

ಡಾ|| ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಾನೇ ಸ್ವತಃ ಕೇಂದ್ರ ಸರ್ಕಾರಕ್ಕೆ ಬರೆದು ಅವರ ಗಮನಕ್ಕೆ ತಂದಿದ್ದೇನೆ. ಮಾನ್ಯ ಸಚಿವರು ಕೇಂದ್ರ ಸರ್ಕಾರದಿಂದ ಇದಕ್ಕೆ ಒಪ್ಪಿಗೆಯನ್ನು ಪಡೆದುಕೊಳ್ಳಲು ಪ್ರಯತ್ನ ಮಾಡಿದರೆ ಒಳ್ಳೆಯದು. ಇಲ್ಲದಿದ್ದರೆ ಜನರ ಹತ್ತಿರ ಕಾಗದ ಮಾತ್ರ ಉಳಿಯುತ್ತದೆ ಪಟ್ಟಾ ಮಾತ್ರ ಬರಲು ಸಾಧ್ಯವಿಲ್ಲ. ಆ ದಿಕ್ಕಿನಲ್ಲಿ ಸಚಿವರು ಪ್ರಯತ್ನ ಮಾಡಬೇಕು, ಅದನ್ನು ಯಾವಾಗ ಮಾಡುತ್ತೀರೆಂದು ಕೇಳಬಯಸುತ್ತೇನೆ. ಹಾಗೂ ಎಷ್ಟು ದಿವಸಗಳಲ್ಲಿ ಮಾಡುತ್ತೀರಿ?

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದವರು ಇಷ್ಟೇ ದಿವಸಗಳಲ್ಲಿ ಇದನ್ನು ಬಿಡುಗಡೆ ಮಾಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ನಾವು ಈ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತಿರುವುದು ತಮಗೂ ಗೊತ್ತಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ 1974 ಅಥವಾ 1978ರವರೆಗೆ ಏನು ಸರ್ಕಾರಿ ಜಮೀನು ಒತ್ತುವರಿಯಾಗಿದೆ ಅದನ್ನು ಒತ್ತುವರಿದಾರರಿಗೆ ಕೊಡಬೇಕು, ನಮ್ಮಲ್ಯಾಂಡ್ ಬ್ಯಾಂಕ್‌ನಿಂದ ಅಷ್ಟು ಜಮೀನನ್ನು ಕೇಂದ್ರ ಸರ್ಕಾರಕ್ಕೆ ತುಂಬಿಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ, ಇದನ್ನು ಕೇಂದ್ರ ಸರ್ಕಾರದವರೂ ಒಪ್ಪಿಕೊಂಡಿದ್ದಾರೆ. ಎಷ್ಟು ಬೇಗ ಕೇಂದ್ರ ಸರ್ಕಾರದವರು ಕೊಡಲು ಸಾಧ್ಯ ಎಂಬ ಬಗ್ಗೆ ಅವರೊಂದಿಗೆ ಪ್ರಸ್ತಾಪ ಮಾಡಿ ವಿಷಯವನ್ನು ತಿಳಿದುಕೊಂಡು ಮಾಹಿತಿ ನೀಡುತ್ತೇವೆ.

ಅಧ್ಯಕ್ಷರು : ನನ್ನ ಕ್ಷೇತ್ರದಲ್ಲಿ ಇಂಥದ್ದೇ ಸಮಸ್ಯೆ ಇದೆ. ಬಹುಶಃ ಕಂದಾಯ ಸಚಿವರ ಗಮನಕ್ಕೆ ಬಂದಿಲ್ಲವೆಂದು ಕಾಣುತ್ತದೆ. ಮಾನ್ಯ ಮುಖ್ಯಮಂತ್ರಿಯವರು ಹೋದ ಸಲ ದೆಹಲಿಗೆ ಹೋಗಿದ್ದಾಗ ಈ ಇಲಾಖೆಯ ಸಚಿವರು ಬದಲಾವಣೆಯಾಗಿ ಅದು ಈಗ ರಾಜೇಶ್ ಪೈಲೆಟರವರ ಬಳಿ ಇದೆ, ನಾನು ಅವರನ್ನು ಭೇಟಿ ಮಾಡಿದ್ದೆ, ಅವರು ಇದರ ಬಗ್ಗೆ ಒಂದು ವಾರದಲ್ಲಿ ಕ್ರಮತೆಗೆದುಕೊಳ್ಳುವುದಾಗಿ ಹೇಳಿದ್ದರು ಎಂದು ಮುಖ್ಯಮಂತ್ರಿಗಳು ನಾಲ್ಕು ದಿವಸಗಳ ಹಿಂದೆ ನನಗೆ ಹೇಳಿದ್ದರು. ನಮ್ಮಲ್ಲೂ ಸಹ ಇಂಥಹದ್ದೆ ಸಮಸ್ಯೆ ಇದೆ, ಆದ್ದರಿಂದ ಇದಕ್ಕೆ ಕೇಂದ್ರದಿಂದ ಬೇಗನೆ ಒಪ್ಪಿಗೆ ಬರಬಹುದು ಎಂಬ ನಿರೀಕ್ಷೆಯಲ್ಲಿದ್ದೇವೆ.

ಡಾ|| ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೆ, ಈ ವಿಷಯ ಕೇಂದ್ರ ಸರ್ಕಾರದ ಒಪ್ಪಿಗೆ ಪಡೆಯಲು ಹೋಗಬೇಕಾಗಿಲ್ಲ ಎಂಬ ವಿಷಯವನ್ನು ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರಬಯಸುತ್ತೇನೆ. 2.5 ಎಕರೆಗಳಿಗಿಂತ ಕಡಿಮೆ ಇರತಕ್ಕಂಥ ಸ್ಥಳಗಳನ್ನು ಸೇರಿಸಿಕೊಂಡು ಮಾಡಿರುವುದು. ಕೇಂದ್ರ ಸರ್ಕಾರದ ಅಧಿಕಾರಿಗಳು ಇಲ್ಲೂ ಇದ್ದಾರೆ. We can take care of that in Bangalore only. It will be decided here only in Bangalore. We need not go to Delhi. ಆದ್ದರಿಂದ ಇವೆಲ್ಲಾ ಕೇಂದ್ರ ಸರ್ಕಾರಕ್ಕೆ ಹೋಗಿ ಒಪ್ಪಿಗೆಯನ್ನು ಪಡೆದುಕೊಂಡು ಬರಬೇಕಾಗಿಲ್ಲ. ಇಲ್ಲಿರತಕ್ಕ ಅಧಿಕಾರಿಗಳಿಂದಲೇ ಪರ್ಶ್ಯೂ ಮಾಡಿ ಇತ್ಯರ್ಥವಾಗತಕ್ಕ ವಿಷಯ. ಇದರ ಬಗ್ಗೆ ಪರ್ಶ್ಯೂ ಮಾಡುತ್ತೀರಾ? ಯಾವಾಗ ಪಟ್ಟಾವನ್ನೂ ಕೊಡಿಸುತ್ತೀರಿ ಎಂದು ಪ್ರಶ್ನೆ ಕೇಳುತ್ತಿದ್ದೇನೆ.

10.30 ಪಿ.ಎಂ.

ಶ್ರೀ ಆರ್.ಎಲ್. ಜಾಲಪ್ಪ : ನನಗೆ ಗೊತ್ತಿರುವ ಮಟ್ಟಿಗೆ ಆ ವಿಚಾರದಲ್ಲಿ ಈಗಲೇ ಅಧಿಕಾರಿಗಳು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕುಂಬಳೆ ಸುಂದರರಾವ್ : ಪಟ್ಟಾ ವಿತರಿಸುವ ಪ್ರಕ್ರಿಯೆ ಏನಿದೆ, ಜನರಿಗೆ ಇದೊಂದು ಭಾವನಾತ್ಮಕವಾದ ವಿಷಯವಾಗಿದ್ದು, ವಾಸಕ್ಕೆ ಮನೆ ಸಿಕ್ಕಿದರೂ ಪಟ್ಟಾ ಸಿಗಲಿಲ್ಲವೆನ್ನುವ ಕಾರಣಕ್ಕೆ ಸ್ವಂತ ಮನೆಯಲ್ಲಿ ಕುಳಿತಿರುವಂಥ ಭಾವನೆ ಅವರಿಗೆ ಬರುತ್ತಿಲ್ಲ. ನಮಗೆ ಪಟ್ಟಾ ಕೊಡಿಸಿಕೊಡಬೇಕೆಂದು ನಿತ್ಯವೂ ನನ್ನನ್ನೂ ಬಂದು ಕಾಡುತ್ತಿದ್ದಾರೆ. ಆದುದರಿಂದ, ಎಲ್ಲಾ ತಾಲ್ಲೂಕು ಕಛೇರಿಗಳಲ್ಲಿ ಜನರಿಗೆ ಪಟ್ಟಾ ಕೊಡಿಸುವಂತೆ ಆದಷ್ಟು ಬೇಗ ಆದೇಶ ಹೊರಡಿಸಿ ಒಂದೆರಡು ತಿಂಗಳುಗಳಲ್ಲಿ ಈ ಪ್ರಕರಣ ಮುಗಿಸಿದರೆ ಎಲ್ಲರಿಗೂ ಕ್ಷೇಮವುಂಟಾಗುತ್ತದೆ. ಸರ್ಕಾರಕ್ಕೂ ಕೀರ್ತಿ ಬರುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ : ಈಗಾಗಲೇ ನಾನು ತಿಳಿಸಿರುವಂತೆ ಇದು ನಮ್ಮ ಕೈಯಲ್ಲಿಲ್ಲ; ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಬೇಕು, ಆ ಬಗ್ಗೆ ನಾವು ಪ್ರಯತ್ನಿಸುತ್ತೇವೆ.

ಅಧ್ಯಕ್ಷರು : ಬಣಕಾರ್‌ರವರೇ, ನಿಮ್ಮ ಪ್ರಶ್ನೆ ಸಂಖ್ಯೆ 110(294)ಕ್ಕೆ ಉತ್ತರ ಒದಗಿಸಿಕೊಡಲು ಮಾನ್ಯ ಸಾರಿಗೆ ಸಚಿವರು ಸ್ವಲ್ಪ ಸಮಯಾವಕಾಶ ಕೇಳಿದ್ದಾರೆ. ಸಾರಿಗೆ ಸಚಿವರೇ, ಇದ್ಕಕೆ ಏಕೆ ಸಮಯಾವಕಾಶ ಬೇಕು?

ಶ್ರೀ ಕೆ.ಎಸ್. ಬೀಳಗಿ : ಮಾನ್ಯ ಅಧ್ಯಕ್ಷರೆ, ನಿನ್ನೆ 20 ಪ್ರಶ್ನೆಗಳು ಬಂದಿದ್ದು, ಅವುಗಳ ಪೈಕಿ 15 ಪ್ರಶ್ನೆಗಳು ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಾಗಿದ್ದು, ಉಳಿದ ಐದು ಚುಕ್ಕೆ ಗುರ್ತಿನ ಪ್ರಶ್ನೆಗಳಲ್ಲಿ ಕೆಲವೊಂದಕ್ಕೆ ಉತ್ತರಗಳನ್ನು ತಯಾರಿಸಿದ್ದು, ಇನ್ನು ಕೆ್ಲವು ಪ್ರಶ್ನೆಗಳಿಗೆ ಉತ್ತರಿಸಲು ಸ್ವಲ್ಪ ಸಮಯ ಕೇಳಿದ್ದೇವೆ. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಇಡೀ ರಾಜ್ಯದಿಂದ ಮಾಹಿತಿ ತರಿಸಬೇಕಾಗಿದೆ.

ಶ್ರೀ ಯು.ಬಿ. ಬಣಕಾರ್ : ಇಡೀ ರಾಜ್ಯಕ್ಕೆ ಸಂಬಂಧಿಸಿದ ಮಾಹಿತಿ ಮಾನ್ಯ ಸಾರಿಗೆ ಸಚಿವರ ಹತ್ತಿರ ಇರಬೇಕಾಗುತ್ತದೆ. ಏಕೆಂದರೆ, ಅವರು ಸಾರಿಗೆಗೆ ಸಂಬಂಧಿಸಿದಂತೆ ಆಡಳಿತ ನೋಡಿ ಕೊಳ್ಳುತ್ತಿರುವವರಾಗಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರ ಹತ್ತಿರ ಮಾಹಿತಿ ಇರುತ್ತದೆ, ಆದರೆ, ಸಂಗ್ರಹಿಸಬೇಕಲ್ಲ.

ಶ್ರೀ ಯು.ಬಿ. ಬಣಕಾರ್ : ಮಾನ್ಯ ಅಧ್ಯಕ್ಷರೆ, ಕೆ.ಎಸ್.ಆರ್.ಟಿ.ಸಿ.ಯಲ್ಲಿರುವ ಎಲ್ಲಾ ಸಮಸ್ಯೆಗಳಿಗೂ ಸಂಬಂಧಿಸಿದಂತೆ ನನ್ನ ಮೂಲ ಪ್ರಶ್ನೆಯಾಗಿದೆ.

ಒಬ್ಬ ಮಾನ್ಯ ಸದಸ್ಯರು : ಇಲಾಖೆಯಲ್ಲಿ ಸಿಬ್ಬಂದಿಗಳು ಕೊರತೆಯಿರುವ ಬಗ್ಗೆ ಬೆಳಗಾವಿಯಲ್ಲೊಮ್ಮೆ ಸಭೆ ನಡೆಸಿದರು. ಆಗ ನಮ್ಮಲ್ಲಿ ಒಟ್ಟು 37 ಸಿಬ್ಬಂದಿಗಳ ಕೊರತೆಯಿದೆಯೆಂದು ಕೇಳಿಕೊಂಡು ಹೋಗಿ ಮೂರು ತಿಂಗಳಾಯಿತು. ಇದುವರೆವಿಗೂ ಸಿಬ್ಬಂದಿಯನ್ನು ನೇಮಿಸುವ ಬಗ್ಗೆ ಏನೂ ಕ್ರಮ ಕೈಗೊಂಡಿಲ್ಲ. ಆದುದರಿಂದ, ತಮ್ಮ ಮೂಲಕ ಸಾರಿಗೆ ಸಚಚಿವರನ್ನು ಕೇಳುತ್ತಿರುವುದೇನೆಂದರೆ, ದಯಮಾಡಿ ಅಲ್ಲಿಗೆ ಸಿಬ್ಬಂದಿಯನ್ನು ಆದಷ್ಟು ಬೇಗ ಹಾಕಬೇಕು. ಮತ್ತು ಅಲ್ಲಿರುವ ಡಿಪೋ-ಮ್ಯಾನೇಜರ್‌ರವರು ಸ್ಟ್ಯಾಟಿಸಟಿಕಲ್ ಡಿಪಾರ್ಟ್‌ಮೆಂಟ್‌ನಿಂದ ಬಂದವರಾಗಿದ್ದು, ಅವರು ತಾಂತ್ರಿಕರಲ್ಲದವರಾದ್ದರಿಂದ ಅವರನ್ನು ಬದಲಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು : ಈ ಪ್ರಶ್ನೆಗಳಿಗೆಲ್ಲಾ ಸಮಗ್ರವಾಗಿ ಉತ್ತರಕೊಡಿ.

ಇಸ್ರೇಲ್ ಮಾದರಿಯ ಕೃಷಿ ಪದ್ಧತಿ.

111 - ಶ್ರೀ ಜಯಚಂದ್ರ ಟಿ.ಬಿ. (ಕಳ್ಳಂಬೆಳ್ಳಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಸ್ರೇಲ್ ಮಾದರಿಯ ಕೃಷಿ ಪದ್ಧತಿಯನ್ನು ರಾಜ್ಯದಲ್ಲಿ ಅಳವಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ಈ ಬಗ್ಗೆ ಅಮೂಲ್ಯ ಸಲಹೆಗಳನ್ನು ರೈತರ ಮನೆ ಬಾಗಿಲಿನಲ್ಲಿ ನೀಡಲು ಸರ್ಕಾರ ಹಾಕಿಕೊಂಡಿರುವ ಕ್ರಮಗಳೇನು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ರಾಜ್ಯ ಸರ್ಕಾರವು ಇಸ್ರೇಲ್ ದೇಶದಲ್ಲಿನ ವಿವಿಧ ಸಂಸ್ಥೆಗಳೊಡನೆ ಐದು ಒಡಂಬಡಿಕೆಯನ್ನು ಮಾಡಿಕೊಂಡಿದ್ದು ಅದರ ಪೈಕಿ ಮೂರು ಕೃಷಿ ಮತ್ತು ತೋಟಗಾರಿಕಾ ಕ್ಷೇತ್ರಗಳಿಗೆ ಸಂಬಂಧಪಟ್ಟಿದ್ದು ಇವುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ ಈ ಮೂರು ಕ್ಷೇತ್ರಗಳ ವಿವರಗಳು ಈ ಕೆಳಕಂಡಂತಿವೆ.

1. ಹತ್ತಿ ಅಭಿವೃದ್ಧಿ ಕುರಿತು ತರಬೇತಿ ಕಾರ್ಯಕ್ರಮ.
2. ಆಲೂಗಡ್ಡೆ ಮತ್ತು ತರಕಾರಿ ಬೀಜಗಳ ಉತ್ಪಾದನೆ.
3. ಪುಷ್ಪ ಕೃಷಿ.

ಆ) ಇದು ಪ್ರಾರಂಭಿಕ ಹಂತದಲ್ಲಿದ್ದು ಇದು ಸೂಕ್ತ ಹಾಗೂ ನಿರಂತರ ಕಂಡುಬಂದಲ್ಲಿ ಇವುಗಳನ್ನು ಕೃಷಿ ವಿಸ್ತಾರಣಾ ವ್ಯಂದದ ಮೂಲಕ ರೈತಾಪಿವರ್ಗಕ್ಕೆ ತಲುಪಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಉತ್ತರ ಒದಗಿಸಿರುವುದರ ಜೊತೆ ಇದಕ್ಕೆ ಸಂಬಂಧಿಸಿದಂತೆ ಇನ್ನೊಂದು ಪೂರಕ ಉತ್ತರ ಈ ರೀತಿಯಾಗಿದೆ. ತಹಲ್ ಕನಸಲ್ಟಿಂಗ್ ಇಂಜಿನಿಯರ್ಸ್ ಅವರೊಡನೆ ಬೆಂಗಳೂರಿನ ಒಳಚರಂಡಿ ನೀರನ್ನು ರಿಸೈಕ್ಲಿಂಗ್ ಮಾಡುವಂಥಾದ್ದು, ಕೋಲಾರ, ಬಿಜಾಪುರ, ಮೈಸೂರು ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಕಾಂಪ್ರಹೆನ್ಸೀವ್ ವಾಟರ್ ಮ್ಯಾನೇಜಮೆಂಟ್ ಮಾಡುವ ಬಗ್ಗೆ ಯೋಜನಾ ವರದಿಯನ್ನು ತಯಾರಿಸುವಂತಾದ್ದು, ಹತ್ತಿಯಲ್ಲಿ ಸಂಶೋಧನೆ ನಡೆಸಿ ಅದನ್ನು ಅಭಿವೃದ್ಧಿಪಡಿಸುವ ದಿಸೆಯಲ್ಲಿ ಹೋಸ್ಕಾಟ್ ಸಂಸ್ಥೆ ಜೊತೆ ಹಾಗೂ ಖಾಸಗಿ ರಂಗದಲ್ಲಿ ಪುಷ್ಪ ಕೃಷಿ ಮಾಡಲು ಸಯಾಜ್ ನರ್ಸರಿ ಸಂಸ್ಥೆ ಜೊತೆ ಮತ್ತು ಸಿನಾಡ್ಕೊ ಸಂಸ್ಥೆ ಜೊತೆ ಒಪ್ಪಂದ ಮಾಡಿಕೊಳ್ಳಲು ಮಾತುಕತೆಯಾಗುತ್ತಿದೆ. ಈ ಸಿನಾಡ್ಕೊ ಸಂಸ್ಥೆ ಜೊತೆ ಕೃಷಿ